# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ
ಟಿ.ದಾಸರಹಳ್ಳಿ ಉಪ ವಿಭಾಗ, ದಾಸರಹಳ್ಳಿ ವಲಯ
ಮಾರಮ್ಮ ದೇವಸ್ಥಾನದ ಹತ್ತಿರ, ಬಾಗಲಗುಂಟೆ

ಸಂಖ್ಯೆ:ಬೃ.ಬೆಂ.ಮ.ಪಾ/ದಾ.ವ/ಸ.ಅ/ವಾ.18/ಪಿಆರ್:48:2022-23 ದಿನಾಂಕ:01.10.2022

## ಬಾಗಲಗುಂಟೆ ವಾರ್ಡ್-18 ಸಮಿತಿ ಸಭೆಯ ನಡವಳಿಗಳು

**ಮಾನ್ಯ ಮುಖ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)/ಪಿಆರ್/35/2020-21, ದಿ.16.04.2021ರ ಆದೇಶದಂತೆ ದಿ.01.10.2022 ರಂದು ನಡೆದ ಬಾಗಲಗುಂಟೆ ವಾರ್ಡ್ ನಂ.18ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-**

**ಸಭೆಗೆ ಹಾಜರಾಗಿದ್ದವರ ವಿವರಗಳು:-**

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1 | ಶ್ರೀ.ಸುರೇಶ್ ರುದ್ರಪ್ಪ | ಆರೋಗ್ಯ ವೈದ್ಯಾಧಿಕಾರಿಗಳು, ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡೆಲ್ ಅಧಿಕಾರಿಗಳು |
| 2 | ಶ್ರೀ.ವೆಂಕಟೇಶಪ್ಪ | ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್ ನಂ.14, ಬಾಗಲಗುಂಟೆ |
| 3 | ಶ್ರೀ.ತನಯ್ ಕುಮಾರ್ ಎ | ಸಹಾಯಕ ಅಭಿಯಂತರರು, ದಾಸರಹಳ್ಳಿ |
| 4 | ಶ್ರೀ.ಮೋಹನ್ ಗೌರೋಜಿ | ಹಿರಿಯ ಆರೋಗ್ಯ ಪರಿವೀಕ್ಷಕರು |
| 5 | ಶ್ರೀ.ಡಾ॥ಹರ್ಷಿತ್ ಎ.ಕೆ | ಮೆಡಿಕಲ್ ಆಫೀಸರ್, ಬಾಗಲಗುಂಟೆ |
| 6 | ಶ್ರೀ.ಲಕ್ಷ್ಮಿ ವೆಂಕಟೇಶ್ ಬಿ.ಟಿ | ಅಧ್ಯಕ್ಷರು, ಕದಂಬ ನಾಗರೀಕ ಸಮಿತಿ, ಬಾಗಲಗುಂಟೆ |
| 7 | ಶ್ರೀ.ಆನಂದ ಜಿ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.19 ಡಿಫೆನ್ಸ್ ಕಾಲೋನಿ |
| 8 | ಶ್ರೀ.ರಂಗನಾಥ್ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.18 ಬಾಗಲಗುಂಟೆ |
| 9 | ಶ್ರೀ.ಸದಾಶಿವಯ್ಯ | ಎಂ.ಇ.ಐ ಬಡಾವಣೆ ನಾಗರೀಕ ಹಿತರಕ್ಷಣಾ ಸಮಿತಿ |
| 10 | ಶ್ರೀ.ಚಿಕ್ಕಮೂರ್ತಿ | ಅರಣ್ಯ ಇಲಾಖೆ, ಬಿಬಿಎಂಪಿ |
| 11 | ಶ್ರೀ.ಮಹಾದೇವಯ್ಯ | ತೋಟಗಾರಿಕೆ ಇಲಾಖೆ, ಬಿಬಿಎಂಪಿ |
| 12 | ಶ್ರೀ.ರಾಜು ಹಾವಣ್ಣವರ್ | ಬಿಬಿಎಂಪಿ ಮಾರ್ಷಲ್ |
| 13 | ಶ್ರೀ.ಟಿ.ಕೃಷ್ಣಮೂರ್ತಿ | ಕಂದಾಯ ಅಧಿಕಾರಿಗಳು, ಕಂದಾಯ ಇಲಾಖೆ |
| 14 | ಶ್ರೀಮತಿ.ಮಹಾಲಕ್ಷ್ಮಿ | ಕೆಲಸ ಪರಿವೀಕ್ಷಕರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ |

ನೋಡಲ್ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಭೆಯ ಸದಸ್ಯರು, ಹಾಜರಿದ್ದ ಅಧಿಕಾರಿಗಳನ್ನು ಹಾಗೂ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

ಈ ಹಿಂದಿನ ಸಭೆಯ ಸಭಾ ನಡವಳಿಯನ್ನು ಚರ್ಚಿಸಿ, ಬಾಕಿ ಇರುವ ಕುಂದು ಕೊರತೆಗಳನ್ನು ಆಧ್ಯತೆಯ ಮೇಲೆ ಪೂರೈಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

Scanned with CamScanner

- **ಬಿ.ಡಬ್ಲ್ಯೂ.ಎಸ್.ಎಸ್.ಬಿ ಗೆ ಸಂಬಂಧಪಟ್ಟ ವಿಷಯದ ಬಗ್ಗೆ.**

➢ ಬಾಗಲಗುಂಟೆ ವಾರ್ಡ್ ವ್ಯಾಪ್ತಿಯಲ್ಲಿ ದಿ.16.10.2022 ರಿಂದ ಶ್ರೀ ಮಾರಮ್ಮ ದೇವಿಯ ಜಾತ್ರೆಯನ್ನು ನಡೆಸುತ್ತಿರುವುದರಿಂದ ವಾರ್ಡ್‌ನ ಸಾರ್ವಜನಿಕರಿಗೆ ಅನಾನುಕೂಲವಾಗದಂತೆ ಹೆಚ್ಚಿನ ನೀರನ್ನು ಸರಬರಾಜು ಮಾಡಲು ಸದಾಶಿವಯ್ಯ ವಾರ್ಡ್ ಸಮಿತಿ ಸದಸ್ಯರು ರವರು ಸಭೆಯಲ್ಲಿ ಕೋರಿದರು.

➢ ಬಾಗಲಗುಂಟೆಯಲ್ಲಿ ಕಾವೇರಿ ಕುಡಿಯುವ ನೀರಿನ ಸರಬರಾಜು ವ್ಯವಸ್ಥೆಯಲ್ಲಿ ವ್ಯತ್ಯಯಗಳು ಉಂಟಾಗುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ನೀರಿನ ಸಮಸ್ಯೆ ಹೆಚ್ಚಾಗುತ್ತಿರುವುದಾಗಿ ವಾರ್ಡ್ ಸಮಿತಿ ಸದಸ್ಯರು ಸಭೆಯಲ್ಲಿ ತಿಳಿಸಿದರು.

➢ ಒಳಚರಂಡಿ ವ್ಯವಸ್ಥೆಗಾಗಿ ಪೈಪ್‌ಲೈನ್ ಅಳವಡಿಸಲು ರಸ್ತೆಯನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಕತ್ತರಿಸಿರುವುದು ಕಂಡುಬಂದಿರುತ್ತದೆ. ಸದರಿ ವಿಷಯಗಳ ದುರಸ್ಥಿ ಕಾರ್ಯವನ್ನು ತುರ್ತಾಗಿ ನಿರ್ವಹಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯವರಿಗೆ ಸೂಚಿಸಲಾಯಿತು.

ಕ್ರಮ: ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ

- **ಕಂದಾಯ ಇಲಾಖೆಗೆ ಸಂಬಂಧಪಟ್ಟ ವಿಷಯದ ಬಗ್ಗೆ.**

➢ ಆಧಾರ್ ಕಾರ್ಡ್‌ಗಳನ್ನು ಗುರುತಿನ ಚೀಟಿ (Voter ID) ಗೆ ಲಿಂಕ್ ಮಾಡುವ ಬಗ್ಗೆ ಮನೆಮನೆಗೆ ಹೋಗಿ ಪ್ರಚಾರ ಮಾಡಿ, ಕಾರ್ಯ ಪ್ರವೃತ್ತರಾಗಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಿ, ಅದರಂತೆ ತುರ್ತು ಕ್ರಮವಹಿಸಲು ಕಂದಾಯ ಇಲಾಖೆಗೆ ಸೂಚಿಸಲಾಯಿತು.

ಕ್ರಮ:ಕಂದಾಯ ಇಲಾಖೆ, ಸ.ಕಂ.ಅ, ವಾ-18/ಸದಸ್ಯ ಕಾರ್ಯದರ್ಶಿ

- **ಘನತ್ಯಾಜ್ಯ ನಿರ್ವಹಣೆ ಬಗ್ಗೆ.**

ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಪರಿಣಾಮಕಾರಿಯಾಗಿ ಘನತ್ಯಾಜ್ಯ ವಿಲೇವಾರಿ ಮಾಡಲು ಕ್ರಮವಹಿಸುತ್ತಿರುವುದಾಗಿ ಸಭೆಗೆ ತಿಳಿಸಿದರು. 35 ಆಟೋಗಳು 35 ಬ್ಲಾಕ್‌ಗಳಲ್ಲಿ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿರುವುದಾಗಿ ತಿಳಿಸಿದರು ಹಾಗೂ ಸಂಬಂಧಿಸಿದ ಗುತ್ತಿಗೆದಾರರು ಹಾಗೂ ಮೇಲ್ವಿಚಾರಕರುಗಳು ಹಾಜರಿದ್ದು, ಘನತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡಲು ಸೂಚಿಸಲಾಯಿತು.

ದಿ.16.10.2022 ರಿಂದ 18.10.2022ರವರೆಗೆ ಬಾಗಲಗುಂಟೆ ಮಾರಮ್ಮ ದೇವಿಯ ಜಾತ್ರೆಯ ಕಾರ್ಯಕ್ರಮವನ್ನು ನಡೆಸಲು ಊರಿನ ಗ್ರಾಮಸ್ಥರು/ಮುಖಂಡರು ತೀರ್ಮಾನಿಸಲಾಗಿದ್ದು, ಸದರಿ ಜಾತ್ರೆಗೆ ಮುಂಜಾಗ್ರತಾ ಕ್ರಮವಾಗಿ ದೇವಸ್ಥಾನದ ಅಕ್ಕಪಕ್ಕದಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಕೈಗೊಳ್ಳುವುದು ಹಾಗೂ ದಿ.18.10.22 ರಂದು ದೇವಸ್ಥಾನದ ಮುಂಬಾಗದಲ್ಲಿ ಬ್ಲೀಚಿಂಗ್ ಪೌಡರ್ ಸಿಂಪಡಿಸಲು ವಾರ್ಡ್ ಕಮಿಟಿಯ ಸದಸ್ಯರು ಸಭೆಯಲ್ಲಿ ತಿಳಿಸಿದರು.

ಜಾತ್ರೆಯ ಪ್ರಯುಕ್ತ ಸಾರ್ವಜನಿಕರಿಗೆ ಹಾಗೂ ಭಕ್ತಾಧಿಗಳಿಗೆ ತೊಂದರೆಯಾಗದಂತೆ ಪ್ರತಿದಿನ ದೇವಸ್ಥಾನದ ಆವರಣ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಸ್ವಚ್ಛತಾ ಕಾರ್ಯವನ್ನು ಕೈಗೊಳ್ಳಬೇಕೆಂದು ವಾರ್ಡ್ ಕಮಿಟಿಯ ಸದಸ್ಯರು ಸಭೆಯಲ್ಲಿ ತಿಳಿಸಿದರು.

ಕ್ರಮ:ಸ.ಕಾ.ನಿ.ಅ (ಘ.ತ್ಯಾ.ನಿ)/ಹಿರಿಯ/ಕಿರಿಯ ಆರೋಗ್ಯ ನಿರೀಕ್ಷಕರು

Scanned with CamScanner

- **ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ.**

ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಸಂಬಂಧಿಸಿದಂತೆ, ಆರೋಗ್ಯ ಪರಿವೀಕ್ಷಕರು ಈ ಕೆಳಕಂಡಂತೆ ಮಾಹಿತಿ ಒದಗಿಸಿದರು.

| | |
|---|---|
| ಒಟ್ಟು ಪ್ರಕರಣಗಳು | 9191 |
| ಬಿಡುಗಡೆಯಾದ ಪ್ರಕರಣಗಳು | 9028 |
| ಸಕ್ರಿಯ ಪ್ರಕರಣಗಳು | 01 |
| ಮರಣ | 162 ಇರುತ್ತದೆಂದು ತಿಳಿಸಿದರು. |

18ನೇ ವಯಸ್ಸಿನ ಮೇಲ್ಪಟ್ಟವರಿಗೆ 1ನೇ ಹಂತದ ಲಸಿಕೆ ಶೇ.101% ನೀಡಲಾಗಿರುತ್ತದೆ ಹಾಗೂ ಎರಡನೇ ಹಂತದ ಲಸಿಕೆಯನ್ನು ಶೇ.101% ನೀಡಲಾಗಿರುತ್ತದೆ ಹಾಗೂ ಬೂಸ್ಟರ್ ಡೋಸ್ 19% (60, ವಯಸ್ಸಿನ ಮೇಲ್ಪಟ್ಟವರಿಗೆ) ನೀಡಲಾಗಿದೆ ಎಂದು ಹಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ.ಮೋಹನ್ ಗಾರೋಜಿ ರವರು ತಿಳಿಸಿದರು. ಹಾಗೂ ಪಾಲಕರು ಮಕ್ಕಳನ್ನು ಆಸ್ಪತ್ರೆಯ ಹತ್ತಿರ ಕರೆ ತಂದು ಲಸಿಕೆ ಹಾಕಿಸಲು ವಾರ್ಡ್‌ನ ನಿವಾಸಿಗಳಿಗೆ ತಿಳಿಸಲು ವಾರ್ಡ್ ಸಮಿತಿ ಸದಸ್ಯರಿಗೆ ಕೋರಲಾಯಿತು.

ವಾರ್ಡ್ ವ್ಯಾಪ್ತಿಯಲ್ಲಿ ಮಳೆ ಹೆಚ್ಚಾಗಿ ಬರುತ್ತಿರುವುದರಿಂದ ರಸ್ತೆಯ ಅಕ್ಕಪಕ್ಕ, ದೇವಸ್ಥಾನದ ಸುತ್ತಮುತ್ತಲಿನ ಪ್ರದೇಶಗಳಿಗೆ ಬ್ಲೀಚಿಂಗ್ ಪೌಡರ್ ಸಿಂಪಡಣೆ ಕಾರ್ಯ ಕೈಗೊಳ್ಳಲು ವಾರ್ಡ್ ಸಮಿತಿ ಸದಸ್ಯರು ಸಭೆಯಲ್ಲಿ ಕೋರಿದರು.

ಕ್ರಮ: ಕೋವಿಡ್ ಆರೋಗ್ಯ ವೈಧ್ಯಾಧಿಕಾರಿಗಳು/ ಹಿರಿಯ ಆರೋಗ್ಯ ಪರಿವೀಕ್ಷಕರು

- **ಇತರೆ ವಿಷಯಗಳ ಬಗ್ಗೆ.**

➢ ಬಿಬಿಎಂಪಿ ಮಾರ್ಷಲ್‌ಗಳು ಕಳಪೆ ಗುಣಮಟ್ಟದ ಪ್ಲಾಸ್ಟಿಕ್ ಬಳಸುತ್ತಿರುವ ಅಂಗಡಿ ಮಾಲೀಕರುಗಳು, ಬೀದಿಬದಿ ವ್ಯಾಪಾರಿಗಳಿಗೆ ಇನ್ನಿತರೆಯವರುಗಳಿಗೆ ದಂಡ ವಿಧಿಸುತ್ತಿರುವುದಾಗಿ ಬಿಬಿಎಂಪಿ ಮಾರ್ಷಲ್‌ಗಳು ತಿಳಿಸಿದರು ಇದನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸರ್ವಾನುಮತದಿಂದ ಸಭೆಯಲ್ಲಿ ಸೂಚಿಸಲಾಯಿತು.

➢ ದಿ.16.10.2022 ರಿಂದ 18.10.2022ರವರೆಗೆ ಬಾಗಲಗುಂಟೆ ಮಾರಮ್ಮ ದೇವಿಯ ಜಾತ್ರೆಯ ಕಾರ್ಯಕ್ರಮವನ್ನು ನಡೆಸಲು ಊರಿನ ಗ್ರಾಮಸ್ಥರು/ಮುಖಂಡರು ತೀರ್ಮಾನಿಸಲಾಗಿದ್ದು, ಸದರಿ ಜಾತ್ರೆಗೆ ಮುಂಜಾಗ್ರತಾ ಕ್ರಮವಾಗಿ ಬೀದಿ ದೀಪಗಳ ನಿರ್ವಹಣೆ, ಕುಡಿಯುವ ನೀರಿನ ವ್ಯವಸ್ಥೆ, ತಾತ್ಕಾಲಿಕ ಶೌಚಾಲಯ, ಮತ್ತು ದೇವಸ್ಥಾನದ ಸುತ್ತಮುತ್ತಲಿನ ರಸ್ತೆಬದಿಗಳಲ್ಲಿ ಹಾಗೂ ಚರಂಡಿಗಳಲ್ಲಿ ಇರುವ ಹೂಳನ್ನು ತೆಗೆದು, ಸಾಗಿಸಲು ಜೆ.ಸಿ.ಬಿ ಹಾಗೂ ಟ್ರಾಕ್ಟರ್ ವ್ಯವಸ್ಥೆಯನ್ನು ಮಾಡಲು ಸಭೆಯಲ್ಲಿ ತಿಳಿಸಿದರು.

Scanned with CamScanner